KARNATAKA STATE POLICE

## ಪತ್ರಿಕಾ ಪ್ರಕಟಣೆ

**ಬೆಂಗಳೂರು ಗ್ರಾಮಾಂತರ ರೈಲ್ವೆ ಪೋಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ:12/2022 ಕಲಂ.341 307, ರೆ/ವಿ 147, 148, 149 ಐ.ಪಿ.ಸಿ. ಕೊಲೆಯತ್ನ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿ ಕಾರ್ಯಚರಣೆ ನಡೆಸಿರುವ ಬಗ್ಗೆ**

*****

ದಿನಾಂಕ: 30-01-2022 ರಂದು ರಾತ್ರಿ 08-15 ಗಂಟೆಯ ಸಮಯದಲ್ಲಿ ಫಿರ್ಯಾದುದಾರರು ತಮ್ಮ ಸ್ನೇಹಿತರೊಂದಿಗೆ ಚಿಕ್ಕಬಾಣಾವಾರ ರೈಲ್ವೇ ನಿಲ್ದಾಣದಿಂದ ಸುಮಾರು 200 ಮೀಟರ್ ದೂರದಲ್ಲಿ ಗಣಪತಿನಗರದ ಹತ್ತಿರ ರೈಲ್ವೇ ಹಳಿಯನ್ನು ದಾಟಿಕೊಂಡು ಹೋಗುವಾಗ್ಗೆ, ಪಿರ್ಯಾದುದಾರರ ಸ್ನೇಹಿತನಿಗೆ ಯಾರೋ ಅಪರಿಚಿತರು ಚಾಕುವಿನಿಂದ ಚುಚ್ಚಿ ಮಾರಾಣಾಂತಿಕ ಗಾಯವನ್ನುಂಟು ಮಾಡಿದ ಬಗ್ಗೆ ಬೆಂಗಳೂರು ಗ್ರಾಮಾಂತರ ರೈಲ್ವೆ ಪೋಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ:12/2022 ಕಲಂ.341 307, ರೆ/ವಿ 147, 148, 149 ಐ.ಪಿ.ಸಿ. ರೀತ್ಯಾ ಪ್ರಕರಣ ದಾಖಲಾಗಿದ್ದು, ಈ ಪ್ರಕರಣವನ್ನು ಪತ್ತೆ ಮಾಡಲು ಮಾನ್ಯ ಶ್ರೀ.ಭಾಸ್ಕರ್ ರಾವ್, ಐ.ಪಿ.ಎಸ್, ಎ.ಡಿ.ಜಿ.ಪಿ, ರೈಲ್ವೇಸ್, ಬೆಂಗಳೂರು ಮತ್ತು ಶ್ರೀಮತಿ. ಸಿರಿ ಗೌರಿ. ಡಿ.ಆರ್. ಐ.ಪಿ.ಎಸ್, ಪೋಲೀಸ್ ಅಧೀಕ್ಷಕರು ರೈಲ್ವೇಸ್, ಬೆಂಗಳೂರು ರವರ ಮಾರ್ಗದರ್ಶನದಲ್ಲಿ ಬೆಂಗಳೂರು ನಗರ ರೈಲ್ವೇ ಪೋಲೀಸ್ ವೃತ್ತದ ವೃತ್ತ ನಿರೀಕ್ಷಕರಾದ ವಿ.ಶಿವಕುಮಾರ್ ರವರ ನೇತೃತ್ವದಲ್ಲಿ ಬೆಂಗಳೂರು ಗ್ರಾಮಾಂತರ ರೈಲ್ವೇ ಪೋಲೀಸ್ ಠಾಣೆಯ ಪಿ.ಎಸ್.ಐ. ಶಿವಕುಮಾರ್.ಎಂ. ಎ.ಎಸ್.ಐ. ಪಿ.ಗೋವಿಂದರಾಜು, ಎಂ.ಜೆ.ಬಸವರಾಜು ರಮೇಶ್. ಹೆಚ್‌ಸಿ-17, ನಾಗೇಶ್. ಹೆಚ್‌ಸಿ-101, ಕೇಶವ್ ಬಿ.ಆರ್ ಹೆಚ್‌ಸಿ-53, ಗೋಪಾಲಕೃಷ್ಣ ಪಿಸಿ-409, ಅಲ್ಲಾವುದ್ದಿನ್ ಪಿಸಿ-406, ರವಿಚಂದ್ರ ಪಿಸಿ-451, ಗಿರೀಶ ಕೆ. ಪಿಸಿ-142 ರವರೊಂದಿಗೆ ಕಾರ್ಯಾಚರಣೆ ನಡೆಸಿ ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಕಾನೂನು ಸಂಘರ್ಷಕ್ಕೆ ಒಳಗಾದ ಮೂರು ಜನ ಬಾಲಕರನ್ನು ಹಾಗೂ ಮೂರು ಜನ ಇತರೆ ಆರೋಪಿಗಳನ್ನು ಪತ್ತೆ ಮಾಡುವಲ್ಲಿ ಯಶಸ್ವಿಯಾಗಿರುತ್ತಾರೆ. ಈ ತಂಡವು ನಡೆಸಿದ ಕಾರ್ಯಾಚರಣೆಯನ್ನು ಮೇಲಾಧಿಕಾರಿಗಳು ಶ್ಲಾಘಿಸಿರುತ್ತಾರೆ.

**ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರು ಹಾಗೂ ಆರೋಪಿಗಳ ವಿವರ**

| | |
|---|---|
| 1 | **ಜೆ-1 ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ವಯಸ್ಸು:17 ವರ್ಷ, ವೃತ್ತಿ: ವೆಲ್ಡಿಂಗ್ ಕೆಲಸ** |
| 2 | **ಜೆ-2 ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ವಯಸ್ಸು:17 ವರ್ಷ, ವೃತ್ತಿ: ಲಾರಿ ಕ್ಲೀನರ್ ಕೆಲಸ** |
| 3 | **ಜೆ-3 ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ವಯಸ್ಸು:17 ವರ್ಷ, ವೃತ್ತಿ: ಗ್ಯಾರೇಜ್‌ನಲ್ಲಿ ಕೆಲಸ** |
| 4 | **ಎ-1 ಆರೋಪಿ ಇಮ್ರಾನ್ ತಂದೆ ಸಮೀಉಲ್ಲಾ ವಯಸ್ಸು:21 ವರ್ಷ, ವೃತ್ತಿ: ವೆಲ್ಡಿಂಗ್ ಕೆಲಸ** |
| 5 | **ಎ-2 ಆರೋಪಿ ವಯಸ್ಸು:21 ವರ್ಷ,.ವೃತ್ತಿ: ವೆಲ್ಡಿಂಗ್ ಕೆಲಸ** |
| 6 | **ಎ-3 ಆರೋಪಿ ವಯಸ್ಸು:18 ವರ್ಷ, ವೃತ್ತಿ:ವೆಲ್ಡಿಂಗ್ ಕೆಲಸ** |